# ಊರ್ಮಿಳಾ

**Que 1: ಕೆಳಗೆ ಕೊಟ್ಟಿರುವವುಗಳಲ್ಲಿ ಅನ್ಯದೇಶೀಯ ಪದಯಾವುದು?**

**(ನೆಲ, ಮನೆ, ಬಯಲು, ಕವರ್)** ***Marks :(1)***

**Ans:** ಕವರ್

**Que 2: ರಾಮಾಯಣ ಮಹಾಕಾವ್ಯದಲ್ಲಿ ಊರ್ಮಿಳೆಯು ಅವಗಣಿಸಲ್ಪಟ್ಟಿದ್ದಾಳೆ ಎಂಬುದಕ್ಕೆ ಕವಿ ಕಯ್ಯಾರ ಕಿಂಞ್ಞಣ್ಣ ರೈಯವರು ಊರ್ಮಿಳಾ ಕವನದಲ್ಲಿ ನೀಡುವ ಕಾರಣಗಳಾವುವು ? ವಿವರಿಸಿ ಬರೆಯಿರಿ** ***Marks :(5)***

**Ans:** ತ್ಯಾಗ,ಸಂಯಮ,ನ್ಲಿಷ್ಠೆ,ವಿಶಾಲಮನೋಭಾವದಿಂದ ಲಕ್ಷ್ಮಣನಿಲ್ಲದೆ ಹದಿನಾಲ್ಕು ವರ್ಷಗಳನ್ನು ಕಳೆದ ಊರ್ಮಿಳೆಯ ವ್ಯಕ್ತಿತ್ವವನ್ನು ಕಾವ್ಯದಲ್ಲಿ ಉಲ್ಲೇಖಿಸದಿರುವುದು ಇತ್ಯಾದಿ ಅಂಶಗಳನ್ನು ವಿವರಿಸಿ ಬರೆದಿದ್ದರೆ

**Que 3: "ಪಕ್ಷಿ ಹೃದಯದ ಬೇನೆಯರಿತು ಬಲು ಬರೆದವನು" ಈ ಮಾತಿನ ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ** ***Marks :(3)***

**Ans:** ಸಂದರ್ಭವನ್ನು ಸೂಚಿಸಿ ವಾಲ್ಮೀಕಿಗೆ ರಾಮಾಯಣದ ರಚನೆಗೆ ಪ್ರೇರಕವಾದ ಕ್ರೌಂಚಪಕ್ಷಿಯ ಘಟನೆಯನ್ನು ವಿವರಿಸಿ ಬರೆದಿದ್ದರೆ

**Que 4: ಊರ್ಮಿಳಾ ಕವಿತೆಯಲ್ಲಿ ನೀವು ಕಂಡುಕೊಂಡ ಊರ್ಮಿಳೆಯ ಅಸಾಧಾರಣ ವ್ಯಕ್ತಿತ್ವವನ್ನು ಕುರಿತು ವಿವರಿಸಿ ಬರೆಯಿರಿ** ***Marks :(5)***

**Ans:** ಕವಿತೆಯಲ್ಲಿ ವಿವರಿಸಲಾದ ಊರ್ಮಿಳೆಯ ತ್ಯಾಗ, ಸಂಯಮನ, ನ್ಲಿಷ್ಠೆ, ವಿಶಾಲಮನೋಭಾವ ಇತ್ಯಾದಿಗಳನ್ನು ವಿವರಿಸಿ ಬರೆದಿದ್ದರೆ

**Que 5: ಮುಖ, ರತ್ನ -ಈ ಪದಗಳ ತದ್ಭವ ರೂಪವನ್ನು ಬರೆಯಿರಿ.** ***Marks :(1)***

**Ans:** ಮುಖ - ಮೊಗ
ರತ್ನ - ರನ್ನ

**Que 6: ಕರುಣೆ, ಚೇತನ -ಈ ಪದಗಳ ಭಾವನಾಮ ರೂಪವನ್ನು ಬರೆಯಿರಿ.** ***Marks :(1)***

**Ans:** ಕರುಣೆ - ಕಾರುಣ್ಯ,
ಚೇತನ - ಚೈತನ್ಯ

**Que 7: ನಯನ ಮನೋಹರ ಈ ಪದವನ್ನು ಬಳಸಿಕೊಂಡು ವಾಕ್ಯವೊಂದನ್ನು ರಚಿಸಿರಿ.** ***Marks :(2)***

**Ans:** ಸೂಕ್ತವಾದ ವಾಕ್ಯರಚನೆಗೆ

**Que 8: ಕೈಮುಗಿ -ಇದರ ವಿಗ್ರಹ ವಾಕ್ಯವನ್ನು ಬರೆದು ಸಮಾಸವನ್ನು ಹೆಸರಿಸಿರಿ.** ***Marks :(1)***

**Ans:** ಕೈಯನ್ನು ಮುಗಿ - ಕ್ರಿಯಾಸಮಾಸ

**Que 9: ಕಳೆಗೊಂಡು ಈ ಪದವನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.** ***Marks :(1)***

**Ans:** ಕಳೆ + ಕೊಂಡು - ಆದೇಶ ಸಂಧಿ

**Que 10: ಅರಿಯದವರಾರುಂಟು - ಈ ಪದವನ್ನು ವಿಂಗಡಿಸಿ ಬರೆಯಿರಿ** ***Marks :(1)***

**Ans:** ಅರಿಯದವರು +ಆರು + ಉಂಟು

**Que 11: ಆದಿ - ಇದರ ವಿರೋಧಾರ್ಥ ಪದ ಯಾವುದು?** ***Marks :(1)***

**Ans:** ಅಂತ್ಯ

**Que 12: ಕಾನನ - ಈ ಪದದ ಪರ್ಯಾಯ ಪದವನ್ನು ಬರೆಯಿರಿ** ***Marks :(1)***

**Ans:** ಕಾಡು, ವನ, ಅರಣ್ಯ ,ವಿಪಿನ - ಇತ್ಯಾದಿ